sdmimd

# Andolana

Date: 13-09-2020 Page No: 10

Edition: Mysore Language: Kannada

## ಎಸ್‌ಡಿಎಂ ಐಎಂಡಿಗೆ 'ಡೈಮಂಡ್' ರೇಟಿಂಗ್

ಮೈಸೂರು: ದೇಶದ ನಿರ್ವಹಣಾ ಶಿಕ್ಷಣ ಸಂಸ್ಥೆಗಳ ಪೈಕಿ, ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಗೆ ಕ್ಯೂಎಸ್- ಐ ಗೇಜ್- ಇಂಡಿಯಾ (QS-IGauge-india)ದಿಂದ ಅತ್ಯುನ್ನತವಾದ ಡೈಮಂಡ್ (ವಜ್ರ) ರೇಟಿಂಗ್ (ಮೌಲ್ಯಾಂಕನ) ದೊರೆತಿದೆ

ಲಂಡನ್‌ನ ಕ್ವಾಕ್ವರೆಲ್ಲಿ ಸಿಮಂಡ್ಸ್‌ನ ಭಾರತದ ಏಜೆನ್ಸಿ ಯಾದ ಕ್ಯೂಎಸ್-ಐಗೇಜ್-ಇಂಡಿಯಾದಿಂದ ಸಂಸ್ಥೆಗೆ ಈ ಮೌಲ್ಯಾಂಕನ ಪ್ರಧಾನವಾಗಿದೆ. ಕ್ವಾಕ್ವರೆಲ್ಲಿ ಸಿಮಂಡ್ಸ್ (QS) ಜಾಗತಿಕ ವಿಶ್ವವಿದ್ಯಾನಿಲಯಗಳ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕವನ್ನು ಪ್ರಪಂಚದಾದ್ಯಂತ ಇರುವ ಉನ್ನತ ಶಿಕ್ಷಣ ಸಂಸ್ಥೆಗಳು, ಕಾರ್ಪೊರೇಟ್ ಉದ್ಯೋಗದಾತರು ಮತ್ತು ವಿದ್ಯಾರ್ಥಿ ಸಮುದಾಯವು ಒಪ್ಪಿಕೊಳ್ಳುತ್ತವೆ ಮತ್ತು ಮಾನ್ಯ ಮಾಡುತ್ತವೆ. ನಿರ್ವ ಹಣಾ ಶಿಕ್ಷಣಕ್ಕೆ ಸೂಕ್ತವಾದ ನಿಯತಾಂಕಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಸ್ವತಂತ್ರ ಅಧ್ಯಯನದ ಆಧಾರದ ಮೇಲೆ ಈ ವ'ೌ ಲ್ಯಾಂ ಕ'ನ'ವ'ನ'್ನು ನಿರ್ಧರಿಸಲಾಗುತ್ತದೆ.

ಎಸ್‌ಡಿಐ ಎಮ್‌ಡಿ ಸಂಸ್ಥೆಗೆ ಬಿಸಿನೆಸ್ ಸ್ಕೂಲ್ ಇಂಪ್ಯಾಕ್ಟ್ ಸಿಸ್ಟಮ್ ಪ್ರಮಾಣ ಪತ್ರವನ್ನು ಯುರೋಪಿಯನ್ ಫೌಂಡೇಶನ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ (CDJB) ಸಂಸ್ಥೆ ನೀಡಿದೆ. ಪಿಜಿಡಿಎಂ ಕಾರ್ಯಕ್ರಮಕ್ಕೆ ಇಎಫ್‌ಎಂಡಿಯ ಮಾನ್ಯತೆಯನ್ನು ಫೆಬ್ರವರಿ 2020 ರಿಂದ 3ವರ್ಷ ಅವಧಿಗೆ ನವೀಕರಣಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೋವಿಡ್ ಪರಿಸ್ಥಿತಿಯಲ್ಲಿ, ಎಸ್‌ಡಿಎಂ ಐಎಂಡಿ ಸಂಸ್ಥೆಯು ತನ್ನ ಎರಡು ವರ್ಷ ಅವಧಿಯ ಪಿಜಿಡಿಎಂ ಕಾರ್ಯಕ್ರಮದ 2020-22 ನೇ ಬ್ಯಾಚ್‌ಗೆ ಪ್ರವೇಶಾತಿ ಯಶಸ್ವಿಯಾಗಿ ಮುಗಿಸಿ, ಆನ್‌ಲೈನ್ ಮುಖಾಂತರ ತರಗತಿಗಳನ್ನು ಪ್ರಾರಂಭಿಸಿದೆ ಎಂದು ಸಂಸ್ಥೆಯ ಮಾಧ್ಯಮ ಅಧಿಕಾರಿ ಡಾ.ಎಂ.ವಿ. ಸುನಿಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Diamond Rating to SDMIMD by QS-I Gauge India